**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ**
**ದಂಡಾಧಿಕಾರಿಗಳವರ ನ್ಯಾಯಾಲಯ,ರೋಣ**

ಸಿ ಸಿ ನಂಬರ :838/2020

CW-1 PW-4

ಹೆಸರು :ಮಲ್ಲಿಕಾರ್ಜುನ ರೆಡ್ಡಿ
ತಂದೆಯ ಹೆಸರು : ಬಸವರಾಜ
ವಯಸ್ಸು : 51 ವರ್ಷ
ಉದ್ಯೋಗ : ಅಬಕಾರಿ ಉಪಅದಿಕ್ಷಕರು, ಉಪವಿಭಾಗ – 6
ಬೆಂಗಳೂರು ನಗರ ಜಿಲ್ಲೆ-3
ವಾಸಸ್ಥಳ : ಬೆಂಗಳೂರು

---

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕ: 12–05–2026 ರಂದು ಪ್ರಮಾಣೀಕರಿಸಲಾಯಿತು.

(ವಿಡಿಯೋ ಕಾನ್ಫೆರನ್ಸ ಮುಖಾಂತರ)

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ:**

ಜೂನ್ 2012 ರಿಂದ ಅಗಸ್ 2021 ರ ವರೆಗೆ ನಾನು ಅಬಕಾರಿ ನೀರಿಕ್ಷಕನಾಗಿ ಎಂದು ಗದಗ ಉಪವಿಭಾಗ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿ: 05.04.2020 ರಂದು ಕೋವಿಡ್ -19 ಸಾಂಕ್ರಾಮಿಕ ರೋಗದ ಕಾರಣ ಲಾಕ್ ಡೌನ್ ಇದ್ದ ಪ್ರಯುಕ್ತ ಅಬಕಾರಿ ಅಕ್ರಮಗಳನ್ನು ಪತ್ತೆ ಹಚ್ಚುವ ನಿಟ್ಟಿನಲ್ಲಿ ನಾನು, ಚಾಸಾ.2, ಮತ್ತು ಚಾಸಾ.7 ರವರು ಸೇರಿಕೊಂಡು ರೋಣ ತಾಲೂಕಿನ ಹೀರೆಹಾಳ ಗ್ರಾಮದಲ್ಕಿಲ್ಲ ಗಸ್ತು ಕಾರ್ಯ ನಿರ್ವಹಿಸುತ್ತಿದ್ದಾಗೆ ನನಗೆ ಮಾಹಿತಿ ಬಂದಿದ್ದು ಆ ಮೇರೆಗೆ ಹಿರಿಹಾಳದಲ್ಲಿ ಇಬ್ಬರು ಪಂಚರನ್ನು ನಮ್ಮೊದಿಗೆ ಸೇರಿಸಿಕೊಂಡು ಸರ್ಕಾರಿ ವಾಹನ ಸಂಖೆ. ಕೆ.ಎ. 26 ಜಿ. 0390 ನೇದ್ದರಲ್ಲಿ ಹೊರಟು ಮುಶಗೇರಿ ಗ್ರಾಮದ ಹತ್ತಿರದ ನೆಲ್ಲೂರು ತಾಂಡಾದ ಕ್ರಾಸ್ ಗೆ ತಲುಪಿದೇವು. ಅಲ್ಲಿಯ ಪೆಟ್ರೋಲ್ ಪಂಪ್ ಹತ್ತಿರ ವಾಹನವನ್ನು ಮರೆಯಲ್ಲಿ ನಿಲ್ಲಿಸಿ ರಸ್ತೆಯ ಗಾವಲು ಕಾರ್ಯ ನಿರ್ವಹಿಸುತ್ತಿರುವಾಗ ಒಂದು ದ್ವಿಚಕ್ರ ವಾಹನ ಬಂದಿದ್ದು ಸವಾರನಿಗೆ ನಿಲ್ಲಿಸಲು ಸೂಚಿಸಲಾಗಿ ಸಮವಸ್ತ್ರದಲ್ಲಿದ್ದ ನಮ್ಮೆಲ್ಲರನ್ನು ಕಂಡು ಗಾಬರಿಗೊಂಡು ನಮ್ಮನ್ನು ದಾಟಿ ವಾಹನವನ್ನು ಬಿಳಿಸಿ ಓಡಿಹೋಗಿದ್ದು ಹಿಡಿಯಲು ಪ್ರಯತ್ನಿಸಲಾಗಿ ಪರಾರಿಯಾಗಿರುತ್ತಾನೆ. ನಂತರ ಆತನು ಬಿಳಿಸಿ

ಹೋದ ವಾಹನವನ್ನು ತಪಾಸಣೆ ನಡೆಸಲು ಶೋಧನಾ ಸಮುಚ್ಚಿತ ಆಧಾರವನ್ನು ಅಬಕಾರಿ ಕಾಯ್ದೆ ಕಲಂ, 54 ರಅಡಿಯಲ್ಲಿ ತಯಾರಿಸಿ ಶೋಧನೆ ಮಾಡಲಾಗಿ ಅದು ಹೀರೋ ಹೊಂಡಾ ಸ್ಪ್ಲೆಂಡರ್ ಪ್ಲಸ್ ವಾಹನವಾಗಿದ್ದು ಅದರ ನೊಂದಣಿ ಸಂಖೆ ಕೆ.ಎ. 26 ಇ.ಸಿ. 4212 ಇದ್ದು ವಾಹನದ ಸೈಡ್ ಬ್ಯಾಗ್ ನಲ್ಲಿ 2 ಲೀಟರಿನ ಎರಡು ಪ್ಲಾಸ್ಟಿಕ್ ಬಾಟಲಿ ನಲ್ಲಿ ಕಳ್ಳಬಟ್ಟಿ ಸರಾಯಿ ಇರುವುದು ಕಂಡು ಬಂದಿದ್ದು ವಾಹನದ ಟ್ಯಾಂಕ್ ಕವರ್ ನಲ್ಲಿ ಆರೋಪಿತನ ಆಧಾರಕಾರ್ಡ ನ ಜೆರಾಕ್ಸ ಪ್ರತಿ ದೊರೆತಿದ್ದು ಮು.ಮಾ. ವಾಹನ ಮತ್ತು ಸದರಿ ಜೆರಾಕ್ಸ ಪ್ರತಿಯನ್ನು ನಾವು ಪಂಚರ ಸಮಕ್ಷಮ ಜಪ್ತು ಪಡಿಸಿಕೊಂಡಿರುತ್ತೇವೆ. ಜಪ್ತುಪಡಿಸಿಕೊಂಡು ಸಂಪೂರ್ಣ ಮು.ಮಾ.ಅನ್ನು ಅದೇ ಬಾಟಲ್ ಗಳಲ್ಲಿ ರಾಸಾಯನಿಕ ಪರೀಕ್ಷೆಗಾಗಿ ತೆಗೆದಿರಿಸಿ ಸೀಲ್ ಮಾಡಿ ಅವುಗಳಿಗೆ ಮಾದರಿ ಚೀಟಿ ಅಂಟಿಸಲಾಯಿತು. ನಂತರ ಸದರಿ ಸ್ಥಳದಲ್ಲಿಯೇ ಸಂಜೆಃ 04.30 ರಿಂದ 05.00 ಗಂಟೆಯ ವರೆಗೆ ಚಾಸಾ.2 ರವರು ಪಂಚನಾಮೆ ಜರುಗಿಸಿದ್ದು, ಮು.ಮಾ. ಹಾಗೂ ವಾಹನದೊಂದಿಗೆ ಕಚೇರಿಗೆ ಬಂದು ದೂರು ಮತ್ತು ಪ.ವ.ವ ಅನ್ನು ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಮು.ಮಾ. ಅನ್ನು ವಶದಲ್ಲಿಟ್ಟುಕೊಳ್ಳಲು ಪ್ರಾಧಿಕೃತ ಅಧಿಕಾರಿಗಳಿಗೆ ಅನುಮತಿ ಕೋರಿ ಪತ್ರ ಬರೆದಿರುತ್ತೇನೆ. ಮರುದಿನ ದಾಳಿಯಲ್ಲಿ ಭಾಗವಹಿಸಿದ ನಮ್ಮ ಸಿಬ್ಬಂದಿಗಳಾದ ಚಾಸಾ.2, 3 ಮತ್ತು 7 ರವರ ಹೇಳಿಕೆ ಪಡೆದಿದ್ದೇನೆ. ದಿಃ 18.05.2020 ರಂದು ಗದಗ ಆರ್.ಟಿ.ಓ ರವರಿಗೆ ವಶಪಡಿಸಿಕೊಂಡ ವಾಹನದ ಮಾಲೀಕತ್ವದ ವರದಿ ಕೋರಿ ಪತ್ರ ಬರೆದಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಚಾಸಾ.7 ರವರಿಗೆ ಹಸ್ತಾಂತರಿಸಿರುತ್ತೇನೆ.

ನಾನು 1 ನೇ ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ಗೈರು ಹಾಜರಿರುವ 1 ನೇ ಆರೊಪಿತನ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ

ಎಂದು ಆತನ ಪರ ವಕೀಲರು ನುಡಿದಿರುವರು. ಸಾಕ್ಷಿಯು 2 ಪ್ಲಾಸ್ಟಿಕ್ ಬಾಟಲ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ. 1 ಮತ್ತು 2 ಎಂದು ಗುರುತಿಸಲಾಗಿದೆ. ಸಾಕ್ಷಿಯು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ಈಗಾಗಲೇ ನಿ.ಪಿ.1 ಎಂದು ಗುರುತಿಸಲಾಗಿದ್ದು

ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ಮಾದರಿ ಸೀಲ್ ಅನ್ನು ನೋಡಿ ಗುರುತಿಸಿದ್ದು ಸದರಿ ಮಾದರಿ ಸೀಲ್ ಅನ್ನು ಈಗಾಗಲೇ ನಿ.ಪಿ.2 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಶೋಧನಾ ಸಮುಚಿತ ಆಧಾರವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.7 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.7 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.8 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.8 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ.ವ.ವ. ಅನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.9 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.9 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ 18.05.2020 ರ ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.10 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.10 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ 05.04.2020 ರ ಅನುಮತಿ ಕೋರಿ ಬರೆದ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.11 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.11 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿತರ ಪರ ವಕೀಲರಿಂದಃ**

ನನಗೆ ಯಾವುದೇ ಮಾಹಿತಿ ಬಂದಿಲ್ಲ, ಪಂಚರ ಸಮಕ್ಷಮ ಯಾವುದೇ ದಾಳಿಗೆ ಹೋಗಿಲ್ಲ, ಆರೋಪಿತನು ಪರಾರಿ ಆಗಿಲ್ಲ, ಯಾವುದೇ ಪಂಚನಾಮೆ ಜರುಗಿಸಿಲ್ಲ, ಯಾವುದೇ ವಸ್ತುವನ್ನು ಜಪ್ತುಪಡಿಸಿಕೊಂಡಿಲ್ಲ, ಯಾವುದೇ ಸಾಕ್ಷಿದಾರ ಹೇಳಿಕೆ ಪಡೆದಿಲ್ಲ, ಸುಳ್ಳು ವರದಿಪಡೆದು ಠಾಣಾ ಅಂಕಿಸಂಖ್ಯೆಗೋಸ್ಕರ ಸುಳ್ಳು ದೂರು ನೀಡಿ ಸುಳ್ಳು ಪ್ರಕರಣ ದಾಖಲಿಸಿ ಆರೋಪಿತನು ಯಾವುದೇ ತಪ್ಪು ಮಾಡದಿದ್ದರು ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು )**

ಓ.ಹೇ.ಕೇ. ಸರಿ ಇದೆ.

(ಹುಲುಗಪ್ಪ. ಡಿ )
ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ.